# ಸಿನಿಮಾ ನಿರ್ಮಾಣದ ಪುಳಕದಲ್ಲಿ ಶೈನ್

ಎಸ್ಸೆನ್

ಕಿರುತೆರೆ, ಬೆಳ್ಳಿತೆರೆಯಲ್ಲಿ ಗುರುತಿಸಿಕೊಂಡಿರುವ ನಟ ಶೈನ್ ಶರಶ್ ಶೆಟ್ಟಿ, ಸಿನಿಮಾ ನಿರ್ಮಾಣದತ್ತ ಮುಖ ಮಾಡಿದ್ದಾರೆ. ‘ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ’, ‘ಮರ್ಯಾದೆ ಪ್ರಶ್ನೆ’, ‘ನಿದ್ರಾದೇವಿ ನೆಕ್ಸ್ಟ್ ಡೋರ್’ ಸಿನಿಮಾಗಳಲ್ಲಿ ನಟಿಸಿದ್ದ ಬಿಗ್‌ಬಾಸ್ ಖ್ಯಾತಿಯ ಶೈನ್ ಶೆಟ್ಟಿ, ‘ಜಸ್ಟ್ ಮ್ಯಾರೀಡ್’ ಮೂಲಕ ನಾಯಕನಾಗಿ ಪರಿಚಿತರಾದರು. ಈಗ ‘ಶಂಕರಾಭರಣ’ ಸಿನಿಮಾ ನಿರ್ಮಾಣ ಮಾಡಿದ್ದು, ತಮ್ಮ ಸಿನಿಮಾ ಅನುಭವಗಳನ್ನು ‘ಸುಧಾ’ದೊಂದಿಗೆ ಹಂಚಿಕೊಂಡಿದ್ದಾರೆ.

◆ ಸಿನಿಮಾ ನಿರ್ಮಾಣ ಕ್ಷೇತ್ರಕ್ಕೆ ಬರುವ ಆಲೋಚನೆ ಗರಿಗೆದರಿದ್ದು ಯಾವಾಗ?

ನಿರ್ಮಾಣ ಕ್ಷೇತ್ರಕ್ಕೆ ಬರಬೇಕೆಂಬುದು ಹಲವು ವರ್ಷಗಳ ಕನಸು. ಈ ಹಿಂದೆ ಹೋಟೆಲ್ ಬಿಸಿನೆಸ್‌ನಲ್ಲಿದ್ದೆ. ಸಿನಿಮಾರಂಗದಲ್ಲಿಯೂ ಮುಂದೊಂದು ದಿನ ಪ್ರೊಡಕ್ಷನ್ ಮಾಡಬೇಕೆಂಬ ಆಲೋಚನೆ ಇತ್ತು. ಆ ಆಲೋಚನೆಯನ್ನು ಕಾರ್ಯರೂಪಕ್ಕೆ ತರಲು ಹಲವು ಯೋಜನೆಗಳು, ಅನುಭವಗಳು ಬೇಕಾಗುತ್ತವೆ. ಕಿರುತೆರೆ, ರಿಯಾಲಿಟಿ ಶೋ, ಸಿನಿಮಾಗಳಲ್ಲಿ ಕೆಲಸ ಮಾಡಿದೆ. 2019ರಿಂದ ಚಿಕ್ಕದೋ ದೊಡ್ಡದೋ ಬೇರೆ ಬೇರೆ ಪಾತ್ರಗಳನ್ನು ನಿರ್ವಹಿಸುತ್ತಾ ಸಿನಿಮಾ ಜಗತ್ತು ಹೇಗೆ ಕೆಲಸ ಮಾಡುತ್ತೆ, ಪ್ರೊಡಕ್ಷನ್ ಕೆಲಸಗಳು ಹೇಗೆ ನಡೆಯುತ್ತವೆ ಎಂಬುದರ ಬಗ್ಗೆ ಸ್ಪಷ್ಟತೆ ಸಿಗುತ್ತಾ ಹೋಯಿತು. 2023ರಲ್ಲಿ ಸಿನಿಮಾ ನಿರ್ಮಾಣ ಮಾಡಬೇಕೆಂಬ ನಿರ್ಧಾರ ಗಟ್ಟಿಯಾಯಿತು. ಕ್ರಿಯಾಶೀಲರನ್ನು ಒಟ್ಟುಗೂಡಿಸಿ, 24ರಲ್ಲಿ ‘ರಂಗಸ್ಥಳ ಸ್ಟುಡಿಯೋಸ್’ ಹುಟ್ಟು ಹಾಕಿದೆವು. 25ರಷ್ಟರಲ್ಲಿ ಒಂದು ಸಿನಿಮಾ ಕೈಗೆತ್ತಿಕೊಂಡು ಈ ವರ್ಷ, ಅಂದರೆ 26ರಲ್ಲಿ ಬಿಡುಗಡೆಗೆ ಅಣಿಯಾಗಿದ್ದೇವೆ.

◆ ‘ಶಂಕರಾಭರಣ’ ಸಿನಿಮಾ ಬಗ್ಗೆ...

ನಮ್ಮ ನಿರ್ಮಾಣ ಸಂಸ್ಥೆಯ ಮೊದಲ ಸಿನಿಮಾ. ಕರಾವಳಿ ಕರ್ನಾಟಕದಲ್ಲಿ ಚಿತ್ರೀಕರಣ ನಡೆದಿದೆ. ಸಿನಿಮಾದ ಮುಖ್ಯ ವಸ್ತು, ಬಸ್. ಅದರ ಹೆಸರು ಶಂಕರಾಭರಣ. ಇದರ ಸುತ್ತಲೇ ಕಥೆ ಹೆಣೆಯಲಾಗಿದೆ. ‘ಮಿಥ್ಯ’ ಸಿನಿಮಾ ನಿರ್ದೇಶಕ ಸುಮಂತ್ ಭಟ್ ಈ ಸಿನಿಮಾ ನಿರ್ದೇಶಿಸಿದ್ದಾರೆ.

◆ ಈ ಸಿನಿಮಾದಿಂದ ಜನ ಏನನ್ನು ನಿರೀಕ್ಷಿಸಬಹುದು?

ಮಜ ಮಜವಾಗಿ ನೋಡಿಸಿಕೊಂಡು ಹೋಗುವ ಸಿನಿಮಾ. ನಾಸ್ಟಾಲ್ಜಿಕ್ ಕ್ಷಣಗಳನ್ನು ಈ ಸಿನಿಮಾದಲ್ಲಿ ನೋಡಬಹುದು. ಬಸ್‌ನಲ್ಲಿ ಓಡಾಡುವ ಬಹುತೇಕರಿಗೆ ಆ ಬಸ್‌ನೊಂದಿಗೆ ಒಂದು ನಂಟು ಬೆಳೆದಿರುತ್ತದೆ. ಬಸ್, ಡ್ರೈವರ್– ಕಂಡಕ್ಟರ್– ದಿನನಿತ್ಯ ಓಡಾಡುವ ಪ್ರಯಾಣಿಕರು... ಒಬ್ಬರಿಗೊಬ್ಬರು ಸಂಬಂಧವೇ ಇರದಿದ್ದರೂ ಒಂದು ದಿನ ಯಾರಾದರೂ ಬಂದಿಲ್ಲ ಎಂದರೆ ಏಕೆ ಬಂದಿಲ್ಲ ಎಂದು ಅನ್ನಿಸಿಯೇ ಅನ್ನಿಸುತ್ತದೆ. ಹೀಗೆ ಸಿನಿಮಾದ ಸಂಗತಿಗಳು ಜನರಿಗೆ ಇಷ್ಟವಾಗುವ ನಿರೀಕ್ಷೆಯಿದೆ. ಸಿಕ್ಕಾಪಟ್ಟೆ ಖುಷಿಯಾಯಿತು ಎಂಬ ಮಾತು ಜನರ ಬಾಯಲ್ಲಿ ಬರಬೇಕು ಎನ್ನುವ ಉದ್ದೇಶದೊಂದಿಗೆ ಸಿನಿಮಾ ಮಾಡಿದ್ದೇವೆ.

◆ ನಿಮ್ಮ ಸಂಸ್ಥೆಯಿಂದ ಯಾವ ರೀತಿ ಸಿನಿಮಾಗಳನ್ನು ನೀಡುವ ಯೋಜನೆಯಿದೆ?

ಮನರಂಜನೆ, ಹಾಸ್ಯದ ಸಿನಿಮಾಗಳನ್ನು ನೀಡಬೇಕೆಂದುಕೊಂಡಿದ್ದೇವೆ. ಜಾನರ್ ಬಗ್ಗೆ ಚೌಕಟ್ಟು ಹಾಕಿಕೊಂಡಿಲ್ಲ. ಸ್ಕ್ರಿಪ್ಟ್, ಕಥೆ ಕೇಳಿದಾಗ ಇದನ್ನು ಸಿನಿಮಾ ಮಾಡಿ ಜನರೆದುರಿಗೆ ಇಟ್ಟರೆ ಮನರಂಜನಾತ್ಮಕವಾಗಿರುತ್ತದೆ ಎನ್ನಿಸಿದರೆ ಅಂಥ ಸಿನಿಮಾಗಳನ್ನು ಮಾಡುತ್ತೇವೆ. ಪ್ರಯೋಗಾತ್ಮಕ ವಿಷಯಗಳು, ವಿಭಿನ್ನ ಆಲೋಚನೆಗಳನ್ನು ಪ್ರಯತ್ನಿಸಬೇಕೆಂದಿದೆ.

◆ ಯಾವ ರೀತಿಯ ಹೊಸ ಪ್ರಯೋಗಗಳಿಗೆ ಮಣೆ ಹಾಕಲಿದ್ದೀರಿ?

ಈಗ ಯಾವುದೂ ಹೊಸತು ಎನ್ನುವಂತಿಲ್ಲ. ಎಲ್ಲದನ್ನೂ ನಮ್ಮ ಹಿರಿಯರು ಮಾಡಿದ್ದಾರೆ. ಮೊದಲು ನೀಡುತ್ತಿದ್ದೇವೆ ಎನ್ನುವುದಕ್ಕಿಂತಲೂ, ಯಾವ ರೀತಿ ಪ್ರೆಸೆಂಟ್ ಮಾಡುತ್ತೇವೆ ಎಂಬುದರ ಕಡೆಗೆ ಗಮನ ನೀಡುತ್ತೇವೆ. ಸಿನಿಮಾ ಪ್ರಸ್ತುತಪಡಿಸುವಲ್ಲಿ ವಿಭಿನ್ನವಾಗಿ ನಿಲ್ಲಬೇಕು ಎಂಬ ಉದ್ದೇಶ. ಸಿನಿಮಾ ಇಂಥದ್ದೇ ಬಜೆಟ್‌ನಲ್ಲಿ ರೂಪುಗೊಳ್ಳಬೇಕು, ಹೀರೊ–ಹೀರೊಯಿನ್ ಇವರೇ ಇರಬೇಕು ಎನ್ನುವುದಕ್ಕಿಂತಲೂ ಸಿನಿಮಾಗೆ ಏನು ಬೇಕು ಅದನ್ನು ಕೊಟ್ಟರೆ ಜನರಿಗೆ ಖುಷಿಯಾಗುತ್ತದೆ. ಪ್ರೇಕ್ಷಕರು ಈಗ ಹೀರೊ– ಹೀರೊಯಿನ್– ನಿರ್ದೇಶಕರು– ಸಿನಿಮಾ ಬಜೆಟ್ ನೋಡುವುದಿಲ್ಲ, ಒಳ್ಳೆಯ ಸಿನಿಮಾ ಮಾಡಿದ್ದಾರಾ ನೋಡುತ್ತಾರೆ– ಇದನ್ನು ಗಮನದಲ್ಲಿಟ್ಟುಕೊಂಡು ಸಿನಿಮಾ ಮಾಡುತ್ತೇವೆ.

◆ ನಟನೆ– ನಿರ್ಮಾಣ ಎರಡರ ಜವಾಬ್ದಾರಿಯೂ ಈ ಸಿನಿಮಾದಲ್ಲಿ ನಿಮ್ಮ ಮೇಲಿದೆ. ಹೇಗೆ ಅದನ್ನು ನಿರ್ವಹಿಸಿದಿರಿ?

ನಟನೆ– ನಿರ್ಮಾಣ ಜೊತೆಗಿದ್ದಾಗ ಒಂದು ಒಳ್ಳೆಯ ಸಿನಿಮಾ ತರಬಹುದು ಎಂದುಕೊಂಡಿದ್ದೆ. ಅದು ನಿಜ. ಆದರೆ ಆ ಒತ್ತಡವನ್ನು ನಮ್ಮ ಹಿರಿಯರು ಹೇಗೆ ನಿಭಾಯಿಸಿದರು ಎಂದು ಅಚ್ಚರಿಯಾಗುತ್ತದೆ. ನಿಜಕ್ಕೂ ಸವಾಲಿನ ಕೆಲಸ.

◆ ಮುಂದಿನ ಪ್ರಾಜೆಕ್ಟ್‌ಗಳು...

ಮೊದಲು ‘ಶಂಕರಾಭರಣ’ ಬಿಡುಗಡೆ ಮೇಲೆ ಗಮನ ನೆಟ್ಟಿದ್ದೇವೆ. ಅದರ ನಂತರ ಚರ್ಚೆಯಲ್ಲಿರುವ ಒಂದಿಷ್ಟು ಕಥೆಗಳನ್ನು ಕಾರ್ಯರೂಪಕ್ಕೆ ತರುತ್ತೇವೆ. ■

